

ಕುಸ್ಕೊ ನಗರದ ಮುಖ್ಯ ಚೌಕ ಪ್ಲಾಜಾ ಡೀ ಅರಮಾಸ್




ಇಂಕಾ, ಯೂರೋಪಿಯನ್ ಸಂಸ್ಕೃತಿ ಮಿಶ್ರಣದಿಂದ ಹುಟ್ಟಿದ ಆಂಡಿಯನ್ ಸಂಸ್ಕೃತಿಯ ಕಲಾ ಪ್ರಕಾರಗಳನ್ನು ಪ್ರವಾಸಿಗರಿಗೆ ಪ್ರದರ್ಶಿಸುತ್ತಿರುವುದು



ಕುಸ್ಕೊ ನಗರದ ಸ್ಯಾನ್ ಕ್ರಿಸ್ಟೋಬಲ್ ಚರ್ಚ್

ಸಾಮ್ರಾಜ್ಯವನ್ನು ವಶಪಡಿಸಿಕೊಂಡ ಸರ್ವಾಧಿಕಾರದ ಕುರುಹಾಗಿ, ಈ ಚೌಕದ ಒಂದು ಬದಿಯಲ್ಲಿ 'ಲಾ ಕೆಥೆಡ್ರಿಲ್' ಎಂಬ ಭವ್ಯವಾದ ಚರ್ಚ್ ನಿರ್ಮಿಸಲಾಯಿತು. ಇಂಕಾ ದೊರೆಗಳ ಕೋಟೆ ಮತ್ತು ದೇವಸ್ಥಾನಗಳನ್ನು ಬೀಳಿಸಿ, ಅಲ್ಲಿನ ಕಲ್ಲುಗಳನ್ನು ತಂದು, ಇಂಕಾದವರಿಗೆ ಪವಿತ್ರವೆಂದು ಪರಿಗಣಿಸಿದ್ದ ಜಾಗದಲ್ಲಿ, ಸೆರೆ ಹಿಡಿದ ಇಂಕಾ ಜನರನ್ನೇ ಬಳಸಿ ಈ ಚರ್ಚನ್ನು ಕಟ್ಟಿದ್ದಾರೆ. ಈ ಚೌಕದಲ್ಲಿ ನಿಂತು ಇಂಕಾ ಬುನಾದಿ ಮೇಲೆ ಕಟ್ಟಲಾದ ಹಲವು ಸ್ಪ್ಯಾನಿಶ್ ಕಟ್ಟಡಗಳನ್ನು ನೋಡಬಹುದು. ಪೆರುವಿನ ಕೆಂಪು ಬಿಳಿಯ ಬಾವುಟ ಮತ್ತು ಏಳು ಬಣ್ಣಗಳಿಂದ ಕೂಡಿದ ಇಂಕಾ ಬಾವುಟಗಳು ಇಲ್ಲಿನ ಕೆಲವು ಕಟ್ಟಡಗಳ ಮೇಲೆ ಕಂಡುಬರುತ್ತವೆ.

## ಸ್ವರ್ಣ ಸ್ವಪ್ನಗಳ ಕೋರಿಕಂಚ

ಪಚಕುಟಿ ರಾಜನ ಕಾಲದಲ್ಲಿ ಸಂಪೂರ್ಣ ಚಿನ್ನದಲ್ಲಿ ಮುಳುಗೆದ್ದ ದೇವಾಲಯ ಕೋರಿಕಂಚ. ದೇವಾಲಯದ ಗೋಡೆಗಳು, ಬಳಸುತ್ತಿದ್ದ ಪಾತ್ರೆ ಪಗಡಗಳು, ಮೂರ್ತಿಗಳು, ಪೀಠಗಳು ಎಲ್ಲವೂ ಚಿನ್ನದ್ದಾಗಿದ್ದವಂತೆ. ಇಂಕಾ ರಾಜ ಅಟಾವುಲ್ಪನನ್ನು ಸ್ಪೇನಿನ ಫ್ರಾನ್ಸಿಸ್ ಪಿಜಾರೋ ಬಂಧಿಸಿ, ಒಂದು ಕೋಣೆಯಷ್ಟು ಬಂಗಾರವನ್ನು ವಸೂಲಿ ಮಾಡಿದ್ದ. ಆಗ ಈ ದೇವಾಲಯದ ಬಂಗಾರವನ್ನೆಲ್ಲಾ ಸ್ಪೇನಿಗರು ದೋಚಿದರು. ಈ ದೇವಸ್ಥಾನದ ಜಾಗದಲ್ಲಿ ಗೋಡೆಗಳನ್ನು ಹಾಗೆಯೇ ಉಳಿಸಿಕೊಂಡು ಚರ್ಚ್ ನಿರ್ಮಿಸಲಾಯಿತು. ಇದರ ನೆಲಮಾಳಿಗೆಯಲ್ಲಿ ನಾವು ಇಂಕಾ ರಾಜರ ಮತ್ತು ಕುಟುಂಬದವರ ಮಮ್ಮಿಗಳು, ಆ ಕಾಲದ ಕೆಲವು ವಸ್ತುಗಳ ಸಂಗ್ರಹವಿದೆ.

## ಐತಿಹಾಸಿಕ ಕೋಟೆ ಸಕ್ಸೈವಾಮನ್

ಕುಸ್ಕೊ ಪಕ್ಕದ ಎತ್ತರದ ಸ್ಥಳದಲ್ಲಿ ಈ ಕೋಟೆಯನ್ನು ಇಂಕಾ ದೊರೆಗಳು ಕಟ್ಟಿದ್ದಾರೆ. ಅಲ್ಲಿರುವ ಅತಿ ಉದ್ದ ಗೋಡೆ 400 ಮೀಟರ್ ಉದ್ದ 6 ಮೀಟರ್ ಎತ್ತರವಿದೆ. ಇದರ ಗಾತ್ರ ಮತ್ತು ವಿನ್ಯಾಸವೇ ವಿಶೇಷವಾದದ್ದು. 200ಕ್ಕೂ ಹೆಚ್ಚು ಟನ್ ತೂಕದ ಕಲ್ಲುಗಳನ್ನು ಚಕ್ರ ಬಳಕೆ ಗೊತ್ತಿಲ್ಲದ, ಕಬ್ಬಿಣ ಬಳಸದಿದ್ದ ಆ ಜನ, ಕಲ್ಲುಗಳ ನಡುವೆ ಸಣ್ಣ ಚಾಕು ಕೂಡ ತೂರದಂತೆ, ಇವುಗಳನ್ನು ಹೇಗೆಲ್ಲಾ ಕರಾರುವಕ್ಕಾಗಿ ನಿರ್ಮಿಸಿರಬಹುದೆಂಬುದು ಸೋಜಿಗ. ಕುಸ್ಕೊದಲ್ಲಿ ವಿವಿಧ ನಿರ್ಮಾಣಗಳನ್ನು ಮಾಡುವಾಗ ಸ್ಪೇನಿಗರು ಸಕ್ಸೈವಾಮನ್ ಕಲ್ಲುಗಳನ್ನೇ ಕಿತ್ತು ತಂದು ಬಳಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in